ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿರೇಕೆರೂರು ತಾಲ್ಲೂಕು ಹಿರೇಕೆರೂರು ನಗರದ ಚೌಡಪ್ಪ, ತಿರಕಪ್ಪನವರ ಹಾಗೂ ಇತರ 4 ಜನರ ಮನೆಗಳಿಗೆ ಮಂಜೂರಾದ ಭಾಗ್ಯ ಜ್ಯೋತಿಯನ್ನು ಮಂಜೂರಾದ ಕೆಲವು ತಿಂಗಳಲ್ಲಿ ಕಿತ್ತು ಹಾಕಲು ಕಾರಣಗಳೇನು?

ಆ) ಪುನಂ ಸದರೀ ಮನೆಗಳಿಗೆ ವಿದ್ಯುತ್ ಮಂಜೂರು ಮಾಡಲು ಸರಕಾರವು ಆದೇಶಿಸುವುದೆ?

ಇ) ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರ ಮನೆಗಳಿಗೆ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಹಣದಲ್ಲಿ ಮಾಡಿದ ವಿದ್ಯುದೀಕರಣದ ಬಾಕಿಯನ್ನು ಮನ್ನ ಮಾಡಲು ಸರಕಾರವು ಕ್ರಮ ತೆಗೆದುಕೊಳ್ಳುವರೇ?

ಶ್ರೀ ಶರಣಪ್ಪ ಬಸಪ್ಪ ದರ್ಶನಾಪುರ್ (ಇಂಧನ ರಾಜ್ಯ ಸಚಿವರು):-

ಅ) ಈ ಆರು ಮನೆಗಳಿಗೆ ಭಾಗ್ಯಜ್ಯೋತಿ ಯೋಜನೆಯಡಿ ವಿದ್ಯುತ್ ಸಂಪರ್ಕ ಕಲ್ಪಿಸಿರುವುದಿಲ್ಲ. ಗೃಹಬಳಕೆ ದೀಪದ ಪ್ರಕಾರ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ. ವಿದ್ಯುತ್ ಬಳಕೆಯ ಬಾಬ್ತು ಬಾಕಿಯನ್ನು ಪಾವತಿ ಮಾಡದೇ ಇದ್ದ ಕಾರಣಕ್ಕಾಗಿ ಈ ಮನೆಗಳಿಗೆ ವಿದ್ಯುತ್ ಸಂಪರ್ಕವನ್ನು ಕಡಿದು (ಡಿಸ್‌ಕನ್‌ಕ್ಷನ್) ಹಾಕಲಾಗಿದೆ.

ಆ) ವಿದ್ಯುತ್ ಸಂಪರ್ಕವನ್ನು ಪುನಃ ವ್ಯವಸ್ಥೆ ಮಾಡಲು ಮಂಡಳಿಗೆ ನೀಡಬೇಕಾಗಿರುವ ಬಾಕಿ ಹಣವನ್ನು ಈ ಬಾಕಿದಾರರು ತೀರಿಸುವುದು ಅಗತ್ಯವಾಗಿದೆ.

ಇ) ಇದು ಸರ್ಕಾರದ ಪರಿಶೀಲನೆಯಲ್ಲಿ ಇರುವುದಿಲ್ಲ.

ವಿಷಯ:- ಶಿವಮೊಗ್ಗ ಜಿಲ್ಲೆಯಲ್ಲಿರುವ ಹಸಿರು ಕಾರ್ಡುಗಳ ಸಂಖ್ಯೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 725 (711)

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ಜಿಲ್ಲೆಯಲ್ಲಿ ಒಟ್ಟು ಎಷ್ಟು ಹಸಿರು ಕಾಡುಗಳನ್ನು ವಿತರಿಸಲಾಗಿದೆ?

ಆ) ಉಳಿದ ಹಸಿರು ಕಾರ್ಡುಗಳನ್ನು ಯಾವಾಗ ವಿತರಿಸಲಾಗುವುದು?

ಶ್ರೀ ಜಿ. ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):-

ಅ) ತ್ರಿವರ್ಣ ಪಡಿತರ ಚೀಟಿಗಳನ್ನು ಹಸಿರು ಪಡಿತರ ಚೀಟಿಗಳಿಂದ ಬದಲಾಯಿಸಿರುವುದು. 2,35,382.

ಹೊಸ ಅರ್ಜಿ ಫಾರಂಗಳು	10,183
ನಗರ ಪ್ರದೇಶ ಬಡ ಕುಟುಂಬಗಳು	29,879
ಒಟ್ಟು	2,75,444

ಕ್ರಮ ಸಂಖ್ಯೆ	ತಾಲ್ಲೂಕಿನ ಹೆಸರು	ತ್ರಿವರ್ಣ ಪಡಿತರ ಚೀಟಿಗಳಿಗೆ ಹಸಿರು ಕಾರ್ಡ್ ಬದಲಾಯಿಸುವುದು.	ಹೊಸ ಕಾರ್ಡ್‌ಗಳು	ನಗರ ಪ್ರದೇಶ ಕಾರ್ಡ್‌ಗಳು	ಒಟ್ಟು
1.	ಶಿವಮೊಗ್ಗ	29719	2396	14815	46939
2.	ಭದ್ರಾವತಿ	34000	-	8482	42482
3.	ಚೆನ್ನಗಿರಿ	35370	-	-	35378
4.	ಹೊನ್ನಾಳಿ	34878	1221	-	36099
5.	ತೀರ್ಥಹಳ್ಳಿ	17841	532	819	19192
6.	ಸಾಗರ	16040	1239	3471	20750
7.	ಶಿಕಾರಿಪುರ	27656	1479	1392	30527
8.	ಸೊರಬ	24256	1963	-	26219
9.	ಹೊಸನಗರ	15622	1353	-	16975
	ಒಟ್ಟು	235382	10183	28979	275444

ಆ) ಭದ್ರಾವತಿ ತಾಲೋಕಿಗೆ 1519 ಹಸಿರು ಕಾರ್ಡುಗಳನ್ನು ಮತ್ತು ಚೆನ್ನಗಿರಿ ತಾಲ್ಲೂಕಿಗೆ 2002 ಹಸಿರು ಕಾರ್ಡುಗಳನ್ನು ಇನ್ನು ವಿತರಣೆ ಮಾಡಿರುವುದಿಲ್ಲ. ಇವುಗಳನ್ನು ಜುಲೈ 96ನೇ ತಿಂಗಳಿನ ಅಂತ್ಯದೊಳಗೆ ವಿತರಣೆ ಮಾಡಲಾಗುವುದು.

ವಿಷಯ:- ರಾಜ್ಯದಲ್ಲಿ ಪ್ರತಿ ರೇಶನ್ ಕಾರ್ಡಿಗೆ (ಹಸಿರು ಕಾರ್ಡು, ರೇಶನ್ ಕಾರ್ಡು) ವಿತರಣೆ ಮಾಡುವ ವಸ್ತುಗಳ ಪ್ರಮಾಣ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 697 (1205)

ಶ್ರೀ ಎ.ರುಕ್ಮಯ್ಯ ಪೂಜಾರಿ:- ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳ ಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?